**ದಿನಾಂಕ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಸ್. ಎನ್. ಆರ್. ವಾದಿ ಪರ ವಕೀಲರಿಂದ**

ದಾವಾ ಸ್ವತ್ತು ಮೊದಲು ಮೈಸೂರು ಇನಾಂತಿ ಸ್ವತ್ತು ಎಂದು ಹೇಳಿದ್ದು, ಅದು ಯಾವ ಸರ್ವೇ ನಂಬರ್ ಮತ್ತು ಅದರಲ್ಲಿ ಎಷ್ಟು ವಿಸ್ತೀರ್ಣ ಇತ್ತು ಗೊತ್ತಿಲ್ಲ.

ಸರ್ವೇ ನಂಬರ್ 1/10, ಸರ್ವೇ ನಂಬರ್ 2/1 ಮತ್ತು ಸರ್ವೇ ನಂಬರ್ 2/3 ಸೇರಿ ಸರ್ವೇ ನಂಬರ್ 117 ಆಗಿದೆ ಎಂದು ತಿಳಿಸಲು ಪಹಣಿ ಮತ್ತು ಮ್ಯೂಟೇಶನ್ ಕೊಟ್ಟಿದ್ದೇನೆ. ಸರ್ವೇ ನಂಬರ್ 1/10 ವಿಸ್ತೀರ್ಣ 1 ಎಕರೆ 9 ಗುಂಟೆ, ಸರ್ವೇ ನಂಬರ್ 2/1ರ ವಿಸ್ತೀರ್ಣ 1 ಎಕರೆ 10 ಗುಂಟೆ ಮತ್ತು ಸರ್ವೇ ನಂಬರ್ 2/3 ರಲ್ಲಿ ವಿಸ್ತೀರ್ಣ 1 ಎಕರೆ 8 ಗುಂಟೆ ಇತ್ತು ಎಂದು ತೋರಿಸಲು ಪಹಣಿ ಮತ್ತು ಮ್ಯೂಟೇಶನ್ ಕೊಟ್ಟಿದ್ದೇನೆ.

ಈ ಮೂರು ಸರ್ವೇ ನಂಬರ್ ಗಳು ಮೊದಲು ನನ್ನ ದೊಡ್ಡಪ್ಪನ ಹೆಸರಿಗೆ ಇದ್ದು, ನನ್ನ ದೊಡ್ಡಪ್ಪನಿಗೆ ಹೇಗೆ ಬಂದಿದೆ ಗೊತ್ತಿಲ್ಲ. ಸದರಿ ಸರ್ವೇ ನಂಬರ್ ಗಳನ್ನು ಸರ್ವೇ ಮಾಡಿಸಿಲ್ಲ. ಸದರಿ ಮೂರು ಸರ್ವೇ ನಂಬರ್ ಗಳ ಪೈಕಿ ಸರ್ವೇ ನಂಬರ್ 2/1 ಸರ್ವೇ ನಂಬರ್ 117ರ ಪೂರ್ವಕ್ಕೆ ಬರುತ್ತದೆ. ಸರ್ವೇ ನಂಬರ್ 2/3 ಸರ್ವೇ ನಂಬರ್ 2/1ರ ಪಶ್ಚಿಮಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ಬರೆದುಕೊಟ್ಟ ವಿಭಾಗದ ಪತ್ರದ ಮೇಲೆ ಮೇಲಿನ ಚೆಕ್ಕು ಬಂದಿ ತಿಳಿಸಿದ್ದೇನೆ. ನನ್ನ ದೊಡ್ಡಪ್ಪ ವಿಭಾಗ ಪತ್ರ ಬರೆದ ನಂತರ ಸರ್ವೇ ಮಾಡಿಸಿಲ್ಲ. ನನ್ನ ದೊಡ್ಡಪ್ಪನಿಗೆ 1 ಎಕರೆ 9 ಗುಂಟೆ ಸ್ವತ್ತು ಇಲ್ಲದೇ ಇದ್ದರೂ ಸಹ ವಿಭಾಗ ಪತ್ರ ಬರೆದಿದ್ದಾರೆ ಎಂದರೆ ಸರಿಯಲ್ಲ.

ನಾವು ಮೂವರು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದೇವೆ ಎಂದು ಸುಳ್ಳು ಪ್ರಮಾಣ ಪತ್ರಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ 1 ಎಕರೆ 10 ಗುಂಟೆ ಸ್ವತ್ತು ಇಲ್ಲದೇ ಇದ್ದರೂ ಸಹ ಪಹಣಿಯನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸರ್ವೇ ನಂಬರ್ ನಲ್ಲಿ ಹಲಸಿಂಗ ಭಟ್ಟಾಚಾರ್ ರವರಿಗೆ ಹಕ್ಕಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರು ಕಂದಾಯ ದಾಖಲೆಗಳಲ್ಲಿ ನಮ್ಮ ಜೊತೆ ಹಲಸಿಂಗ ಭಟ್ಟಾಚಾರ್ ಹೆಸರು ಇದೆ ಎಂದರೆ ಸರಿಯಲ್ಲ. ಹಲಸಿಂಗ ಭಟ್ಟಾಚಾರ್ ರವರು ದಾವಾ ಸರ್ವೇ ನಂಬರ್ ನಲ್ಲಿ ¼ ಹಿಸ್ಸೆ ಹೊಂದಿದ್ದು, ಅದನ್ನು ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಕ್ರಯ ಮಾಡುವ ಮೊದಲು ಮತ್ತು ಈಗಲೂ ಸಹ ಹಲಸಿಂಗ ಭಟ್ಟಾಚಾರ್ ರವರು ದಾವಾ ಸ್ವತ್ತಿನ ಖಾತೆದಾರರಾಗಿದ್ದಾರೆ ಎಂದರೆ ಸರಿಯಲ್ಲ. ವಾದಿಯು 2003ರಲ್ಲಿ ಕ್ರಯ ಪಡೆದ ನಂತರ ಈಗಲೂ ಸಹ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಾವು ಮೂವರು ಪ್ರತಿವಾದಿಗಳು ದಾವಾ ಸ್ವತ್ತನ್ನು ಕಬಳಿಸಲು ದಾವಾ ಸ್ವತ್ತಿನಲ್ಲಿ ನಾವೇ ಸ್ವಾಧೀನದಲ್ಲಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ಕ್ರಯಕ್ಕೆ ಪಡೆದ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೆ ದಾವಾ ಸ್ವತ್ತಿನಲ್ಲಿ ವಾದಿಯ ಸ್ವಾಧೀನಾನುಭವಕ್ಕೆ ನಾವು ತೊಂದರೆ ನೀಡಿದ್ದೇವೆ ಎಂದರೆ ಸರಿಯಲ್ಲ.

**ರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.